ಚಾಮರಾಜನಗರ ಮತ್ತು ರಾಮಸಮುದ್ರಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಮಾನ್ಯ ಅಧ್ಯಕ್ಷರಿಗೆ ಪ್ರಶ್ನೋತ್ತರ ವೇಳೆ ಆದ ನಂತರ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ ಎಂದು ಹೇಳಿ ಕೊಂಡಿದ್ದೆ. ಅದು ಬಹಳ ಮುಖ್ಯವಾದಂಥ ವಿಚಾರ. ಚಾಮರಾಜನಗರದಲ್ಲಿನ ಕುಡಿಯುವ ನೀರಿನ ಅವ್ಯವಸ್ಥೆಯ ಬಗ್ಗೆ ತಿಳಿಸಿ ಮಾನ್ಯ ಅಧ್ಯಕ್ಷರಿಗೆ ನಾನು ಒಂದು ಪತ್ರವನ್ನು ಬರೆದಿದ್ದೇನೆ. ಅಲ್ಲಿ ಕುಡಿಯುವ ನೀರಿನ ಪರಿಸ್ಥಿತಿಯು ಕಳೆದ ೧೫ ದಿವಸಗಳಿಂದ ಭೀಕರ ಪರಿಸ್ಥಿತಿಯನ್ನು ತಲುಪಿದೆ. ಚಾಮರಾಜನಗರ ಮತ್ತು ರಾಮಸಮುದ್ರಕ್ಕೆ ನೀರು ಸರಬರಾಜು ೨-೩ ದಿವಸಗಳಿಗೊಮ್ಮೆ ಸರಬರಾಜು ಆಗುತ್ತಾ ಇತ್ತು, ಅದೂ ಸಹ ಸರಿಯಾಗಿ ಆಗುತ್ತಿಲ್ಲ. ಅಲ್ಲಿ ಈಗಾಗಲೇ ೭೫ ಅಶ್ವಶಕ್ತಿಯ ಮೋಟಾರನ್ನು ಅಳವಡಿಸಲಾಗಿದೆ. ಆದರೂ ನೀರು ಪೂರೈಕೆಯು ಸರಿಯಾಗಿ ಆಗುತ್ತಾ ಇಲ್ಲ. ಇದನ್ನು ನಾನು ಕಳೆದ ೬ ತಿಂಗಳುಗಳಿಂದಲೂ ಮಾನ್ಯ ಸಚಿವರಿಗೆ, ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುತ್ತಾ ಬಂದಿದ್ದೇನೆ. ಈ ರೀತಿಯಾಗಿ ಯಾವುದೇ ಮಾನವಿಯನ್ನು ಸಲ್ಲಿಸಿದ್ದರೂ ಅದರಿಂದ ಯಾವುದೇ ಪ್ರಯೋಜನವಾಗಿಲ್ಲ. ಅಲ್ಲಿ ನಿನ್ನೆ ಚಾಮರಾಜೇಶ್ವರ ದೇವರ ರಥೋತ್ಸವ ಇತ್ತು. ಸುಮಾರು ೫೦ ಸಾವಿರಕ್ಕಿಂತಲೂ ಹೆಚ್ಚು ಭಕ್ತಾದಿಗಳು ಅಲ್ಲಿ ಭಾಗವಹಿಸಿದ್ದಾರೆ. ೯ ಗಂಟೆಗೆ ರಥೋತ್ಸವದ ಮೆರವಣಿಗೆಯು ಜರುಗಬೇಕಾಗಿದ್ದರೂ ನೀರು ಇಲ್ಲದೆ ೧೨ ಗಂಟೆಯ ವೇಳೆ ಮೆರವಣಿಗೆ ಹೊರಟಿತು, ದೇವರನ್ನು ತೊಳೆಯುವುದಕ್ಕೆ ಕೂಡ ನೀರಿಲ್ಲದೆ ಅಲ್ಲಿ ಅಶಾಂತ ವಾತಾವರಣ ಸೃಷ್ಟಿಯಾಗಿತ್ತು. ಭಾರಿ ದೊಡ್ಡ ಪ್ರಮಾಣದಲ್ಲಿ ಗದ್ದಲ ಆಗತಕ್ಕಂಥ ಪರಿಸ್ಥಿತಿ ಇತ್ತು. ಇಂತಹ ಪರಿಸ್ಥಿತಿಯಲ್ಲಿ ನನಗೆ ಸರಕಾರದ ಪರವಾಗಿ ಒಂದು ಆಶ್ವಾಸನೆಯನ್ನು ನನಗೆ ಕೊಡಬೇಕು. ಈ ಹಿಂದೆಯೇ ನಗರಾಭಿವೃದ್ಧಿ ಸಚಿವರಿಗೆ ಮಾನವಿಯನ್ನು ಸಲ್ಲಿಸಿದ್ದರೂ ಸಹ ಪ್ರಯೋಜನವಾಗಿಲ್ಲ.....

ಉಪಾಧ್ಯಕ್ಷಿಣಿಯವರು.—ಮಾನ್ಯ ವಾಟಾಳ್ ನಾಗರಾಜ್‌ರವರೇ, ಈ ಬಗ್ಗೆ ಪ್ರಸ್ತಾಪಿಸಲು ತಾವು ಏನಾದರೂ ನೋಟಿಸ್ ಕೊಟ್ಟಿದ್ದೀರಾ? ಅವರ ಅಪ್ಪಣೆ ಪಡೆದುಕೊಂಡಿದ್ದೀರಾ?

ಶ್ರೀ ವಾಟಾಳ್ ನಾಗರಾಜ್.—ನಾನು ಮಾನ್ಯ ಅಧ್ಯಕ್ಷರನ್ನು ಕೇಳಿಕೊಂಡಿದ್ದೇನೆ. ಅಧ್ಯಕ್ಷರು ಅವಕಾಶ ಕೊಡುತ್ತೇನೆ ಎಂದು ಹೇಳಿದ್ದರು. ಏಕೆಂದರೆ ನಾನು ನಿನ್ನೆ ತಾನೇ ಅಲ್ಲಿಂದ ಬಂದಿದ್ದೇನೆ. ಅಲ್ಲಿ ಬಹಳ ಅನಾನುಕೂಲಕರ ಪರಿಸ್ಥಿತಿ ಇರುವುದರಿಂದ ನಾನು ಈ ಬಗ್ಗೆ ಮಾತನಾಡುತ್ತಿದ್ದೇನೆ. ಮಾನ್ಯ ಸದಸ್ಯರಾದ ರಾಜುಗೌಡರು ಕೂಡ ನಮ್ಮ ಪಕ್ಕದ ಕ್ಷೇತ್ರದವರು. ಅವರಿಗೂ ಈ ವಿಷಯಗಳು ಚೆನ್ನಾಗಿ ತಿಳಿದಿದೆ. ಈ ಬಗ್ಗೆ ಸಂಬಂಧಪಟ್ಟವರು ಒಂದು ಆಶ್ವಾಸನೆ ಕೊಟ್ಟು ಅಲ್ಲಿ ನೀರಿನ ಬಗ್ಗೆ ಏನು ತೊಂದರೆ ಇದೆ ಅದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ಆದುದರಿಂದ ಸಂಬಂಧಪಟ್ಟ ಸಚಿವರು ಒಂದು ಆಶ್ವಾಸನೆಯನ್ನು ಕೊಡಬೇಕು. ಇದರಿಂದ ಅಲ್ಲಿ ಪರಿಸ್ಥಿತಿ ಬಹಳ ಭೀಕರ ಆಗುತ್ತದೆ.

ಉಪಾಧ್ಯಕ್ಷಿಣಿಯವರು.—ತಾವು ಇವೊತ್ತು ಬೆಳಿಗ್ಗೆ ತಾನೆ ಪತ್ರ ಕೊಟ್ಟಿದ್ದೀರಿ. ಯಾವುದಾದರೂ ಒಂದು ರೂಲ್ ಪ್ರಕಾರ ಸರಿಯಾದ ರೀತಿಯಲ್ಲಿ ನೋಟೀಸ್ ಕೊಟ್ಟರೆ ಅದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸಿ ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಅದನ್ನು ತೆಗೆದುಕೊಳ್ಳುವುದಕ್ಕೆ ಸುಲಭ ಆಗುತ್ತದೆ. ತಾವು ಹೇಳಿರುವ ವಿಷಯ ನಮ್ಮ ಗಮನಕ್ಕೆ ಬಂದಿದೆ, ಸಂಬಂಧಪಟ್ಟ ಸಚಿವರಿಗೆ ಇದನ್ನು ತಿಳಿಸಬೇಕಾದರೆ ಯಾವುದಾದರೂ ರೂಲ್ ಪ್ರಕಾರ ನೋಟಿಸ್ ಕೊಡಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಸಚಿವರು).—ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವ ಸಮಸ್ಯೆ, ಅವರ ಕಳಕಳಿ ಸಭೆಯ ಗಮನಕ್ಕೆ ಬಂದಿದೆ. ಈ ವಿಚಾರವನ್ನು ಸಂಬಂಧಿಸಿದ ಸಚಿವರಿಗೆ ತಿಳಿಸಿ, ಕೂಡಲೇ ಅದಕ್ಕೆ ಪರಿಹಾರ ಕಂಡುಹಿಡಿಯಲು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಅಲ್ಲಿ ಸಣ್ಣ ಗಲಾಟೆಯೇನಾದರೂ ನಡೆದಿದ್ದರೆ ರಥೋತ್ಸವದ ಸಮಯದಲ್ಲಿ ದೊಡ್ಡ ದುರಂತವೇ ಉದ್ಭವವಾಗುತ್ತಿತ್ತು. ಇಂಥದ್ದು ಉಲ್ಬಣಗೊಳ್ಳುವುದಕ್ಕೆ ಬಿಡಬೇಡಿ ಎಂದು ಮಾನ್ಯ ಮಂತ್ರಿಗಳಿಗೆ ಹೇಳಿದ್ದು. ನಾನು ೬ ತಿಂಗಳಿಂದ ಒಂದೇ ಸಮನೆ ಈ ಬಗ್ಗೆ ಹೋರಾಟ ಒತ್ತಾಯ ಏನೇನು ಮಾಡಬೇಕೋ ಅದೆಲ್ಲ ಮಾಡಿ ಸಾಕಾಗಿದೆ. ಸರ್ಕಾರ ಆ ಗಡಿ

ತಾಲ್ಲೂಕನ್ನು ಸಮಗ್ರವಾಗಿ ಕಡೆಗಣಿಸಿರುವುದು ಸರಿಯಾದ ನೀತಿಯಲ್ಲ. ಆದ್ದರಿಂದ ತಾವು ದಯಮಾಡಿ ಸಂಬಂಧಿಸಿದ ಸಚಿವರಿಗೆ ಇದನ್ನು ಹೇಳಬೇಕು. ಈ ಬಗ್ಗೆ ಅನುಕೂಲ ಮಾಡಿಕೊಡಿ ಇಲ್ಲದಿದ್ದರೆ ಅಲ್ಲಿನ ಜನರಿಗೆ ಬಹಳ ತೊಂದರೆಯಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಖಂಡಿತವಾಗಿ ಈ ಬಗ್ಗೆ ಗಮನ ಕೊಡುತ್ತೇವೆ.

ಗಮನ ಸೆಳೆಯುವ ಸೂಚನೆಗಳು

ಪ್ರೊವಿಜನಲ್ ಸರ್ಟಿಫಿಕೇಟ್ ನೀಡದಿರುವುದರಿಂದ ಕಾಸರಗೋಡಿನ ಅನೇಕ ವಿದ್ಯಾರ್ಥಿಗಳಿಗೆ ತೊಂದರೆ ಆಗಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ಹೊರರಾಜ್ಯದ ಎಸ್.ಎಸ್.ಎಲ್.ಸಿ. ಪಾಸಾದ ಕನ್ನಡ ವಿದ್ಯಾರ್ಥಿಗಳು ನಮ್ಮಲ್ಲಿ ಪಿ.ಯು.ಸಿ. ಸೇರುವುದಕ್ಕೆ ಅವಕಾಶ ಕೊಡಬೇಕಾದರೆ ಅವರಿಗೆ ಪ್ರೊವಿಜನಲ್ ಸರ್ಟಿಫಿಕೇಟ್ ಕೊಡುವುದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ ಪುಟ್ಟಸ್ವಾಮಿಗೌಡ (ನೀರಾವರಿ ಸಚಿವರು).—ಮಾನ್ಯ ಅಧ್ಯಕ್ಷರೇ, ವಿದ್ಯಾ ಸಚಿವರ ಹೆಸರಿನಲ್ಲಿರುವ ಈ ಹೇಳಿಕೆಯನ್ನು ಸಭೆಗೆ ಕೊಡಬಯಸುತ್ತೇನೆ.

ಕರ್ನಾಟಕೇತರ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳನ್ನು ಪ್ರಥಮ ಪಿಯುಸಿ ತರಗತಿಗೆ ದಾಖಲಾತಿ ಮಾಡಿಕೊಳ್ಳಲು ಸಮಾನಾಂತರ ಪರೀಕ್ಷೆಗಳ ಪಟ್ಟಿಯನ್ನು ದಿನಾಂಕ ೧೧-೭-೭೧ರಲ್ಲಿನ ಸುತ್ತೋಲೆ ಮೂಲಕ ತಿಳಿಸಲಾಗಿದೆ. ಅದರಂತೆ ಕೇರಳ ರಾಜ್ಯದ ಎಸ್ಎಸ್ಎಲ್ಸಿ ಪರೀಕ್ಷೆಯನ್ನು ಪ್ರಥಮ ಬಾರಿಗೆ ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಮಾತ್ರ ಪ್ರಥಮ ಪಿಯುಸಿಗೆ ದಾಖಲಾಗಲು ಅರ್ಹರಾಗಿರುತ್ತಾರೆ.

ಕೇರಳದ (ಕಾಸರಗೋಡು) ಎಸ್ಎಸ್ಎಲ್ಸಿ ಪರೀಕ್ಷೆಯನ್ನು ಪ್ರಥಮ ಬಾರಿಗೆ ತೇರ್ಗಡೆಯಾದ ೪೫೨ ಅಭ್ಯರ್ಥಿಗಳಿಗೆ ೧೯೯೦-೯೧ರಲ್ಲಿ ''ತಾತ್ಕಾಲಿಕ ಪ್ರಾಪ್ತತೆ ಯೋಗ್ಯತಾ ಪತ್ರ''ವನ್ನು ನೀಡಲಾಗಿದೆ. ಅದರಂತೆ ಇದೇ ಪರೀಕ್ಷೆಯನ್ನು (ಕೇರಳ ರಾಜ್ಯದ ಎಸ್ಎಸ್ಎಲ್ಸಿ) ಪ್ರಥಮ ಬಾರಿಯಲ್ಲಿ ಪಾಸಾಗದೆ ಇದ್ದ ೨೫ ಅರ್ಜಿಗಳನ್ನು ಅರ್ಜಿಯ ಹಂತದಲ್ಲಿಯೇ ತಿರಸ್ಕರಿಸಲಾಗಿದೆ.

ತ ಹಿಂದೆ ೨ನೇ ಮತ್ತು ೩ನೇ ಪ್ರಯತ್ನದಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಮೇಲೆ ಹೇಳಿರುವ ಯೋಗ್ಯತಾ ಪತ್ರವನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇಲ್ಲಿ ಪ್ರಮುಖವಾದ ಎರಡು ಅಂಶಗಳಿಂದರೆ, ಕೇರಳದ ಕಾಸರಗೋಡಿನ ಸುತ್ತಮುತ್ತ ಯಾರು ಎಸ್.ಎಸ್.ಎಲ್.ಸಿ.ಯನ್ನು ಎರಡು ಮೂರನೆ ಬಾರಿಗೆ ಪಾಸ್ ಮಾಡಿದ್ದಾರೋ ಅವರು ಕರ್ನಾಟಕದಲ್ಲೇ ಪಿ.ಯು.ಸಿ.ಗೆ ಸೇರಬೇಕೆಂದು ಬರುವ ಸಂದರ್ಭದಲ್ಲಿ ಅವರಿಗೆ ಪ್ರಾವಿಜನಲ್ ಎಲಿಜಿಬಿಲಿಟಿ ಸರ್ಟಿಫಿಕೇಟ್ ಕೊಡಬೇಕಾಗುತ್ತದೆ ಆದರೆ ೨ನೇ ಮತ್ತು ೩ನೇ ಪ್ರಯತ್ನದಲ್ಲಿ ಪಾಸಾದವರಿಗೆ ಹಾಗೆ ಕೊಡಲು ಆಗುವುದಿಲ್ಲವೆಂದು ಹೇಳಿದ್ದಾರೆ. ಪಾಸ್ ಎಂದರೆ ಎರಡು ಅಥವಾ ಮೂರನೇ ಬಾರಿಗೆ ಪಾಸ್ ಆದರೂ ಪಿ.ಯು.ಸಿ.ಗೆ ಸೇರಲು ಯಾವ ಅಡ್ಡಿಯೂ ಬರುವುದಿಲ್ಲ. ಆದ್ದರಿಂದ ನೀವು ಸರ್ಟಿಫಿಕೇಟ್ ಕೊಡದಿದ್ದರೆ ಆ ಕನ್ನಡಿಗರಿಗೆ ತೊಂದರೆಯಾಗುತ್ತದೆ. ಆದ್ದರಿಂದ ತಾವು ಈಗಿನ ಸರ್ಕಾರಿ ಆಜ್ಞೆ ಏನಿದೆ, ಅದನ್ನು ಪುನರ್ವಿಮರ್ಶೆ ಮಾಡದಿದ್ದರೆ ೧೫೦ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತದೆ. ಅವರುಗಳು ಸನ್ನಬಳಿಬಂದಿದ್ದರು ಅವರಿಗೆ ಇಲ್ಲೆ ಅವಕಾಶವಿಲ್ಲ ಎಂದು ಬಿಟ್ಟರೆ ಅವರು ಎಲ್ಲಿಗೆ ತಾನೇ ಹೋಗಬೇಕು? ಸರ್ಕಾರ ಕೂಡಲೇ ಇವರಿಗೊ ಅವಕಾಶ ಮಾಡಿಕೊಡ ಬೇಕು. ಈಗ ಸರ್ಕಾರ ಕೊಟ್ಟಿರುವುದು ತಪ್ಪು ಮಾಹಿತಿ ಇದೆ. ಹಿಂದಿನ ಪದ್ಧತಿಯನ್ನು ಈಗಲೂ ಮುಂದುವರೆಸದೆ. ಇದನ್ನು ಪರಿಶೀಲಿಸಿ, ಹೊಸದಾಗಿ ಒಂದು ಸರ್ಕಾರಿ ಆಜ್ಞೆ ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಸಚಿವರು).—ಇದನ್ನು ಪರಿಶೀಲಿಸಲಾಗುವುದು.

ಶ್ರೀ ವಾಟಾಳ್ ನಾಗರಾಜ್,—ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ಪರಿಸ್ಥಿತಿ ಗಡಿನಾಡ ಕನ್ನಡಿಗರಿಗೆ ಎಲ್ಲ ರೀತಿಯ ನೆರವನ್ನು ಕೊಡಬೇಕು ಎನ್ನುವುದು ಸರ್ಕಾರದ ನೀತಿ ಮತ್ತು ನಿಲುವು ಆಗಿದೆ. ಗಡಿನಾಡಿನ ಕನ್ನಡಿಗರಿಗೆ ಎಲ್ಲ ರೀತಿಯ ನೆರವನ್ನು ಕೊಡಬೇಕು ಇಲ್ಲಿ ಕಾಸರಗೋಡು